ಎಮ್.ವಿ.ಸಿ. 204/2022
ಫ್ರಾಸಾಃ 01

ದಿನಾಂಕಃ 20-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ನನ್ನ ಸಹಿ ಮಾಡಿರುತ್ತೇನೆ.

1. ಪ್ರ.ವ.ವ. ದೃಢಿಕೃತ ನಕಲು ನಿಪಿ-1
2. ದೂರಿನ ದೃಢಿಕೃತ ನಕಲು ನಿಪಿ-2
3. ಅಪಘಾತ ಸ್ಥಳ ಪಂಚನಾಮೆ ಮತ್ತು ನಕಾಶೆಯ ದೃಢಿಕೃತ ನಕಲು ನಿಪಿ-3
4. ಇನಕ್ವೇಸ್ಟ ಪಂಚನಾಮೆಯ ದೃಡಿಕೃತ ನಕಲು ನಿಪಿ-4
5. ಐ.ಎಂ.ವಿ. ವರದಿಯ ದೃಢಿಕೃತ ನಕಲು ನಿಪಿ-5
6. ಪಿ ಎಮ್ ವರದಿಯ ದೃಢಿಕೃತ ನಕಲು ನಿಪಿ-6
7. ದೋಷಾರೋಪಣ ಪತ್ರದ ದೃಢಿಕೃತ ನಕಲು ನಿಪಿ-7
8. ನನ್ನ ತಮ್ಮ ಅಮೃತ ಈತನ ಜನನ ಪ್ರಮಾಣ ಪತ್ರದ ನೋಟರಿಕೃತ ಯತ ನಕಲು ನಿಪಿ-8(ಮೂಲ ಜನನ ಪ್ರಮಾಣ ಪತ್ರವನ್ನು ತುಲನೆಗೆಂದು ಹಾಜರು ಮಾಡಿದ್ದು ತಾಳೆ ಆಗಿದ್ದರಿಂದ ವಾಪಸ್ಸು ನೀಡಲಾಗಿದೆ.)
9. ನಿಪಿ 8 ರ ಇಂಗ್ಲೀಷ ಅನುವಾದಿತ ದಾಖಲೆ ನಿಪಿ 8(ಎ).
10. ನನ್ನ ತಮ್ಮ ಅಮೃತ ಈತನ ಶಾಲಾ ಟಿಸಿಯ ನೋಟರಿಕೃತ ಯತ ನಕಲು

ನಿಪಿ-9(ಮೂಲ ಟಿಸಿಯನ್ನು ತುಲನೆಗೆಂದು ಹಾಜರು ಮಾಡಿದ್ದು ತಾಳೆ ಆಗಿದ್ದರಿಂದ ವಾಪಸ್ಸು ನೀಡಲಾಗಿದೆ.)

11. ನಿಪಿ 9 ರ ಇಂಗ್ಲೀಷ ಅನುವಾದಿತ ದಾಖಲೆ ನಿಪಿ 9(ಎ).

12. ನನ್ನ ತಮ್ಮ ಅಮೃತ ಈತನ ಆಧಾರ ಕಾರ್ಡಿನ  ನೋಟರಿಕೃತ ಯತ ನಕಲು ನಿಪಿ-10(ಮೂಲ ಆಧಾರ ಕಾರ್ಡನ್ನು ತುಲನೆಗೆಂದು ಹಾಜರು ಮಾಡಿದ್ದು ತಾಳೆ ಆಗಿದ್ದರಿಂದ ವಾಪಸ್ಸು ನೀಡಲಾಗಿದೆ.)

13. ನನ್ನ ಶಾಲಾ ಸರ್ಟಿಫಿಕೇಟನ ನೋಟರಿ ಕೃತ ಯತ ನಕಲು ನಿಪಿ -11. (ಮೂಲ ಶಾಲಾ ಸರ್ಟಿ ಫಿಕೇಟನ್ನು ತುಲನೆಗೆಂದು ಹಾಜರು ಮಾಡಿದ್ದು ತಾಳೆ ಆಗಿದ್ದರಿಂದ ವಾಪಸ್ಸು ನೀಡಲಾಗಿದೆ.)

14. ನಿಪಿ -11ರ ಇಂಗ್ಲೀಷ ಅನುವಾದಿತ ದಾಖಲೆ ನಿಪಿ 11(ಎ).

15. ನನ್ನ ಪ್ಯಾನ ಕಾರ್ಡಿನ ನೋಟರಿಕೃತ ಯತಾ ನಕಲು ನಿಪಿ-12.(ಮೂಲ ಪ್ಯಾನ ಕಾರ್ಡನ್ನು ತುಲನೆಗೆಂದು ಹಾಜರು ಮಾಡಿದ್ದು ತಾಳೆ ಆಗಿದ್ದರಿಂದ ವಾಪಸ್ಸು ನೀಡಲಾಗಿದೆ.)

16. ನನ್ನ ಆಧಾರ ಕಾರ್ಡಿನ ನೋಟರಿಕೃತ ಯಥಾ ನಕಲು ನಿಪಿ-13.(ಮೂಲ ಆಧಾರ ಕಾರ್ಡನ್ನು ತುಲನೆಗೆಂದು ಹಾಜರು ಮಾಡಿದ್ದು ತಾಳೆ ಆಗಿದ್ದರಿಂದ ವಾಪಸ್ಸು ನೀಡಲಾಗಿದೆ.)

17. ನನ್ನ ತಾಯಿಯ ಮರಣ ಪ್ರಮಾಣ ಪತ್ರದ ನೋಟರಿಕೃತ ಯತ ನಕಲು ನಿಪಿ-  14.(ಮೂಲ ಮರಣ ಪ್ರಮಾಣ ಪತ್ರವನ್ನು ತುಲನೆಗೆಂದು ಹಾಜರು ಮಾಡಿದ್ದು ತಾಳೆ ಆಗಿದ್ದರಿಂದ ವಾಪಸ್ಸು ನೀಡಲಾಗಿದೆ.)

18. ನಿಪಿ-14ರ ಇಂಗ್ಲೀಷ ಅನುವಾದಿತ ದಾಖಲೆ ನಿಪಿ-14(ಎ).

19. ನನ್ನ ತಂದೆಯ ಮರಣ ಪ್ರಮಾಣ ಪತ್ರದ ನೋಟರಿಕೃತ ಯತ ನಕಲು

ನಿಪಿ-15.(ಮೂಲ ಮರಣ ಪ್ರಮಾಣ ಪತ್ರವನ್ನು ತುಲನೆಗೆಂದು ಹಾಜರು ಮಾಡಿದ್ದು ತಾಳೆ ಆಗಿದ್ದರಿಂದ ವಾಪಸ್ಸು ನೀಡಲಾಗಿದೆ.)

20. ನಿಪಿ 15ರ ಇಂಗ್ಲೀಷ ಅನುವಾದಿತ ದಾಖಲೆ ನಿಪಿ-15(ಎ).

ನಾನು ಒಂದನೇಯ ಎದುರುದಾರರ ವಾಹನಕ್ಕೆ ಎರಡನೆ ಎದುರುದಾರ ಇನ್ಸುರನ್ಸ ಕಂಪನಿಯವರು ಕೊಟ್ಟ ಪಾಲಿಸಿಯ ಜೆರಾಕ್ಸ ಪ್ರತಿಯನ್ನು ಹಾಜರು ಮಾಡಿದ್ದೇನೆ ಅದೇ ರೀತಿ ನನ್ನ ತಮ್ಮನಿಗೆ ಡ್ರೈವಿಂಗ ಲೈಸನ್ಸ ಇತ್ತು ಎಂದು ತೋರಿಸಲು ಡೌನಲೋಡೆಡ್ ಜೆರಾಕ್ಸ ಪ್ರತಿಯನ್ನು ಹಾಜರು ಮಾಡಿದ್ದೇನೆ ಈ ದಾಖಲೆಗಳು ಜೆರಾಕ್ಸ ಕಾಫಿ ಆಗಿದ್ದರಿಂದ ಗುರುತಿಸಲು ಆಗಲಿಲ್ಲ.

ಕಾರಣ, ಅರ್ಜಿಯಲ್ಲಿ ಕೇಳಿದಂತೆ ಪರಿಹಾರಕ್ಕೆ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೆನೆ.

<u>ಪಾಟೀ ಸವಾಲುಃ 1ನೇ ಎದುರುದಾರ ಪರ ಮಾನ್ಯ ವಕೀಲರಿಂದಃ</u>

ಒಂದನೇ ಎದುರುದಾರರ ಪರ ಮಾನ್ಯ ವಕೀಲರು ಪಾಟೀ ಸವಾಲಿಗೆ ವೇಳೆ ಕೊರಿದ್ದು ವೇಳೆ ಮಂಜೂರು ಮಾಡಲು ನಿರಾಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4 ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕಃ 18-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1 ನೇ ಎದುರುದಾರ ಪರ ಮಾನ್ಯ ವಕೀಲರಿಂದಃ

ಮೃತ ಅಮೃತ ನನ್ನ ತಮ್ಮ. ನನ್ನ ಮದುವೆಯಾಗಿದೆ, ನಾನು ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ನನ್ನನ್ನು ನನ್ನ ಗಂಡನೇ ನೋಡಿಕೊಳ್ಳುತ್ತಿದ್ದಾನೆ ಎಂದರೆ ಸರಿಯಲ್ಲ, ಸಾಕ್ಷಿಯು ಮೃತ ನನ್ನ ತಮ್ಮನೂ ಸಹ ನೋಡಿಕೊಳ್ಳುತ್ತಿದ್ದ ಎನ್ನುತ್ತಾರೆ. ನಾನು ನನ್ನ ತಮ್ಮನನ್ನು ಅವಲಂಬಿತವಾಗದೇ ಇದ್ದರೂ ಸಹ ಅವಲಂಬಿತವಾಗಿದ್ದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಮದುವೆಯಾಗುವುದಕ್ಕಿಂತ ಮೊದಲು ನಿಮ್ಮ ತಂದೆ-ತಾಯಿ ನಿಮ್ಮನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ತಂದೆ-ತಾಯಿ ನಾವು ಚಿಕ್ಕವರಿದ್ದಾಗಲೇ ಮೃತಪಟ್ಟಿದ್ದರಿಂದ ನನ್ನ ತಮ್ಮನೇ ನೋಡಿಕೊಳ್ಳುತ್ತಿದ್ದ ಎನ್ನುತ್ತಾರೆ. ನನ್ನ ತಮ್ಮ ಅಮೃತ ಈತನ ಆದಾಯದಿಂದ ನಾನು ಜೀವನ ನಡೆಸುತ್ತಿದ್ದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಟ್ರಕ್ ನಂ. ಎಂಹೆಚ್-09, ಸಿಯು-6897 ಈ ವಾಹನದ ಚಾಲಕನಿಗೆ ಅಪಘಾತದ ಸಮಯದಲ್ಲಿ ಡ್ರೈವಿಂಗ್ ಲೈಸನ್ಸ ಇತ್ತು ಎಂದರೆ ಸರಿ. ನನಗೆ ಈಗ ತೋರಿಸಿದ ಡ್ರೈವಿಂಗ್ ಲೈಸನ್ಸನ ವಿವರಗಳನ್ನೊಳಗೊಂಡ ದಾಖಲೆಯು ವಾಹನ ಸಂಖ್ಯೆ ಎಂಹೆಚ್-09, ಸಿಯು-6897 ಈ ವಾಹನದ ಚಾಲಕನಾದ ನನ್ನ ತಮ್ಮನ ಡ್ರೈವಿಂಗ್ ಲೈಸನ್ಸನ ಎಕ್ಸಟ್ರ್ಯಾಕ್ಟ ಎಂದರೆ ಸರಿ, ಸಾಕ್ಷಿಯು ಆ ದಾಖಲೆಯನ್ನು ಗುರುತಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಈ ಅಪಘಾತವಾದ ನಂತರ ನಿಮ್ಮ ತಮ್ಮ ಅಮೃತ ಈತನ ಡ್ರೈವಿಂಗ್ ಲೈಸನ್ಸನ್ನು ನಿಮಗೆ ಪೊಲೀಸರಿಗೆ ಕೊಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನಾನು ಡ್ರೈವಿಂಗ್ ಲೈಸನ್ಸನ್ನು ಪೊಲೀಸ್ ಠಾಣೆಗೆ ಕೊಟ್ಟಿದ್ದೆನು ಎನ್ನುತ್ತಾರೆ.

ಅಪಘಾತವಾದ ವಾಹನ ಸಂಖ್ಯೆ ಎಂಹೆಚ್-09, ಸಿಯು-6897 ವಾಹನಕ್ಕೆ ಇನ್ಸೂರನ್ಸ ಇತ್ತು ಎಂದರೆ ಸರಿ. ನನ್ನ ತಮ್ಮನಿಗೆ ಟ್ರಕ್ ಚಲಾಯಿಸಲು ಬರುತ್ತಿದ್ದುದರಿಂದ ಮತ್ತು ಆತನಿಗೆ ಡ್ರೈವಿಂಗ್ ಲೈಸನ್ಸ ಇದ್ದುದರಿಂದಲೇ 1 ನೇ ಎದುರುದಾರನು ಆತನಿಗೆ ಚಾಲಕನೆಂದು ಕೆಲಸಕ್ಕೆ ಸೇರಿಕೊಂಡನು ಎಂದರೆ ಸರಿ. ನಿಮ್ಮ ತಮ್ಮ ಅಮೃತ ಈತನು ಮದ್ಯಪಾನ ಮಾಡುತ್ತಿದ್ದನಾ ಎಂದರೆ ಸಾಕ್ಷಿಯು ಮದ್ಯಪಾನ ಮಾಡುತ್ತಿರಲಿಲ್ಲ ಎನ್ನುತ್ತಾರೆ. ನನ್ನ ತಮ್ಮನು ಮದ್ಯಪಾನ ಮಾಡುವ ಹವ್ಯಾಸ ಹೊಂದದೇ ಇದ್ದುದರಿಂದಲೇ 1 ನೇ ಎದುರುದಾರನು ಆತನಿಗೆ ವಾಹನ ಸಂಖ್ಯೆ ಎಂಹೆಚ್-09, ಸಿಯು-6897 ನ್ನು ಚಾಲಕನೆಂದು ಡ್ರೈವಿಂಗ್ ಮಾಡಲು ಕೊಟ್ಟಿದ್ದನು ಎಂದರೆ ಸರಿ.

ಈ ಅಪಘಾತವು ಧಾರವಾಡ ಜಿಲ್ಲೆಯಲ್ಲಿ ಆಯಿತು ಎಂದರೆ ಸರಿ. ನನ್ನ ತಮ್ಮ ಅಮೃತ ಮೃತಪಡುವ ಮೊದಲು ನನ್ನ ಜೊತೆ ಮಹಾರಾಷ್ಟ್ರದ ಇಚಲಕರಂಜಿಯಲ್ಲಿ ವಾಸವಾಗಿದ್ದನು. ನೀವು ಬೆಳಗಾವಿಯಲ್ಲಿ ವಾಸವಾಗಿದ್ದೀರಿ ಎಂದು ತೋರಿಸಲು ನಿಮ್ಮಲ್ಲಿ ದಾಖಲೆ ಇದೆಯಾ ಎಂದರೆ ಸಾಕ್ಷಿಯು ದಾಖಲೆ ಇಲ್ಲ ಎನ್ನುತ್ತಾರೆ. ನಾನು ಬೆಳಗಾವಿಯಲ್ಲಿ ವಾಸವಾಗದೇ ಇದ್ದುದರಿಂದ ನನ್ನಲ್ಲಿ ಓಟರ ಐಡಿ ಕಾರ್ಡ, ಆಧಾರ ಕಾರ್ಡ, ರೇಷನ್ ಕಾರ್ಡ ಇಲ್ಲ ಎಂದರೆ ಸಾಕ್ಷಿಯು ನಾನು ಮಹಾರಾಷ್ಟ್ರದಿಂದ ಈ ಅಪಘಾತವಾದ ನಂತರ ಬೆಳಗಾವಿಗೆ ಬಂದು ವಾಸವಾಗಿದ್ದೇವೆ ಎನ್ನುತ್ತಾರೆ. ನನ್ನ ತಮ್ಮ ಅಮೃತ ಈತನಿಗೆ ಮದುವೆಯಾಗಿರಲಿಲ್ಲ. ನಿಮ್ಮ ತಂದೆ ಯಾವಾಗ ಮೃತಪಟ್ಟಿದ್ದು ಎಂದರೆ ಸಾಕ್ಷಿಯು 4 ವರ್ಷದ ಹಿಂದೆ ಮೃತಪಟ್ಟಿದ್ದಾರೆ ಎನ್ನುತ್ತಾರೆ, ನನ್ನ ತಾಯಿ ನಾನು ಚಿಕ್ಕವಳಿದ್ದಾಗ ಮೃತಪಟ್ಟಿದ್ದಳು. ನನ್ನ ತಮ್ಮನ ವಾರಸುದಾರ ನಾನೊಬ್ಬಳೇ ತೋರಿಸುವ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿ. ಈ ಅಪಘಾತವು ನನ್ನ ತಮ್ಮನ ತಪ್ಪಿನಿಂದ ಆಯಿತು ಎಂದರೆ ಸರಿಯಲ್ಲ.

ನನ್ನ ತಮ್ಮನ ತಪ್ಪಿನಿಂದಲೇ ಈ ಅಪಘಾತವಾಗಿ ಟ್ರಕ್ಕಿನ ಮಾಲಕನಾದ 1 ನೇ ಎದುರುದಾರರಿಗೆ ನಷ್ಟ ಉಂಟುಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಅಪಘಾತವು ನನ್ನ ತಮ್ಮನ ತಪ್ಪಿನಿಂದಲೇ ಆಗಿದ್ದರೂ ಆತನೇ ಈ ಅಪಘಾತ ಮಾಡಿ 1 ನೇ ಎದುರುದಾರರಿಗೆ ನಷ್ಟ ಉಂಟುಮಾಡಿದ್ದರೂ ನನ್ನ ತಮ್ಮನ ತಪ್ಪಿನಿಂದ ಈ ಅಪಘಾತವಾಗಿಲ್ಲವೆಂದು 1 ನೇ ಎದುರುದಾರರಿಗೆ ನಷ್ಟ ಉಂಟು ಮಾಡಿಲ್ಲವೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತವು ನನ್ನ ತಮ್ಮನ ತಪ್ಪಿನಿಂದಲೇ ಆಗಿದ್ದರಿಂದ 1 ನೇ ಎದುರುದಾರನು ನನಗೆ ಪರಿಹಾರದ ಹಣವನ್ನು ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ವಾಹನ ಸಂಖ್ಯೆ ಎಂಹೆಚ್-09, ಸಿಯು-6897 ವಾಹನಕ್ಕೆ ಇನ್ಸೂರನ್ಸ ಇದ್ದುದರಿಂದ ಮತ್ತು ನನ್ನ ತಮ್ಮನಿಗೆ ಡ್ರೈವಿಂಗ್ ಲೈಸನ್ಸ ಇದ್ದುದರಿಂದ ಪರಿಹಾರದ ಹಣವನ್ನು 2 ನೇ ಎದುರುದಾರ ಒಬ್ಬರೇ ಕೊಡಲು ಬಾಧ್ಯಸ್ಥರು ಎಂದರೆ ಸರಿಯಲ್ಲ. ಈ ಅಪಘಾತವು ನಿಮ್ಮ ತಮ್ಮ ಅಮೃತ ಈತನ ತಪ್ಪಿನಿಂದಲೇ ಆಗಿದ್ದರಿಂದ ಪೊಲೀಸರು ನಿಮ್ಮ ತಮ್ಮನ ವಿರುದ್ದವೇ ಕೇಸು ದಾಖಲಿಸಿದ್ದಾರೆ ಎಂದರೆ ಸಾಕ್ಷಿಯು ನನ್ನ ತಮ್ಮ ಮೃತಪಟ್ಟಾಗ ನನ್ನ ಕಡೆಯವರು ಯಾರೂ ಇಲ್ಲದೇ ಇರುವುದರಿಂದ ಅದನ್ನು ದುರುಪಯೋಗ ಪಡಿಸಿ ಪೊಲೀಸರು ನನ್ನ ತಮ್ಮನ ವಿರುದ್ಧ ಕೇಸು ದಾಖಲಿಸಿದ್ದಾರೆ ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4 ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.